**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ.**295/2016** ದಿನಾಂಕಃ**25-9-2024**

ಪಿ.ಡಬ್ಲ್ಯೂಃ**1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : 6 ನೇ ಪ್ರತಿವಾದಿಯ ಪರ ಶ್ರೀ ಜಿ ಬಿ ವಕೀಲರಿಂದ**

1. 1 ನೇ ವಾದಿ ಅನ್ನಪೂರ್ಣಮ್ಮ ಮತ್ತು 2 ನೇ ವಾದಿ ಓಂಕಾರಮ್ಮ ಇಬ್ಬರೂ ಆರೋಗ್ಯವಾಗಿರುತ್ತಾರೆ. ವಾದಿಯರಿಗೆ ಸ್ವತಃ ಬಂದು ಸಾಕ್ಷ್ಯ ನುಡಿಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಕಾಲು ನೋವು ಇರುತ್ತದೆ ಎಂದು ನುಡಿಯುತ್ತಾರೆ. ನಾನು ವಾದಿಯರ ಗಮನಕ್ಕೆ ಬರದಂತೆ ಈ ದಾವೆಯನ್ನು ನಾನೇ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮರಿಯಪ್ಪ ರವರಿಗೆ ಇಬ್ಬರು ಗಂಡು ಮಕ್ಕಳು ನಾಲ್ವರು ಗಂಡು ಮಕ್ಕಳು. ಸಿದ್ದಪ್ಪ ಮತ್ತು ಈಶ್ವರಪ್ಪ ನಡುವೆ ವಿಭಾಗ ಆಗಿರುತ್ತದೆ. ಎಷ್ಟನೇ ಇಸವಿಯಲ್ಲಿ ವಿಭಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 2 ರಿಂದ 5 ನೇ ಪ್ರತಿವಾದಿಯರು ಈಶ್ವರಪ್ಪನವರ ಮಕ್ಕಳು ಎಂದರೆ ಸರಿ. ಈಶ್ವರಪ್ಪ ಮತ್ತು ಸಿದ್ದಪ್ಪನ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

2. ವಿಭಾಗ ಆಗಿರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಸಿದ್ದಪ್ಪರಿಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ಸದರಿ ಗಂಡು ಮಗ ವೃಷಭೇಂದ್ರಪ್ಪ ಆಗಿದ್ದು ಅವರು ಈಗ ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿ ಭಾಗ್ಯಮ್ಮ ಸದರಿ  ವೃಷಭೇಂದ್ರಪ್ಪರವರ ಹೆಂಡತಿ. ಸದರಿ 1 ನೇ ಪ್ರತಿವಾದಿ ಮತ್ತು  ವೃಷಭೇಂದ್ರಪ್ಪರವರಿಗೆ ಸಂತತಿ ಇರುವುದಿಲ್ಲ. ವೃಷಭೇಂದ್ರಪ್ಪ ಈ ದಾವೆ ದಾಖಲಿಸುವ ಮೊದಲು ಮರಣ ಹೊಂದಿರುತ್ತಾರೆ. ಅವರು ಖಾಯಿಲೆಯಿಂದ ನರಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ನಂತರ ಮರಣ ಹೊಂದಿರುತ್ತಾರೆ. ಸದರಿ ಚಿಕಿತ್ಸೆಗಾಗಿ ಸುಮಾರು 20 ಲಕ್ಷ ರೂ ಖರ್ಚು

ಆಗಿರುತ್ತದೆ ಎಂದರೆ ಸರಿಯಲ್ಲ. ವೃಷಭೇಂದ್ರಪ್ಪರವರ ಆಸ್ಪತ್ರೆ ಚಿಕಿತ್ಸೆ ಖರ್ಚಿಗಾಗಿ 1 ನೇ ಪ್ರತಿವಾದಿ ದಾವಾ 13 ನೇ ಅನುಸೂಚಿ ಸ್ವತ್ತು ಸರ್ವೆ ನಂ.19/1 ಎ ರನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ದಾವಾ ಅನುಸೂಚಿ 13 ನೇ ಸ್ವತ್ತನ್ನು ದಾವಾ ದಾಖಲಿಸುವ ಸಂದರ್ಭದಲ್ಲಿ ಸೇರ್ಪಡೆ ಮಾಡಿರಲಿಲ್ಲ ನಂತರ ಮಾಡಿರುತ್ತೇನೆ. ಸದರಿ ಆಸ್ತಿಯನ್ನು ಸಿದ್ದಪ್ಪನವರು ಖರೀದಿ ಮಾಡಿದ ಆಸ್ತಿ ಎಂದರೆ ಸರಿ. ದಾವೆ ದಾಖಲಿಸುವ ಸಮಯದಲ್ಲಿ 13 ನೇ ಅನುಸೂಚಿ ಸ್ವತ್ತಿನ ಖಾತೆಯು ಸಿದ್ದಪ್ಪರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ಸದರಿ ಆಸ್ತಿಯ ಖಾತೆ ಮಾಡಿಸಿಕೊಂಡು ಮಾರಾಟ ಮಾಡುವಂತೆ ವಾದಿಯರು 1 ನೇ ಪ್ರತಿವಾದಿಗೆ ತಿಳಿಸಿದ್ದರು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಮಾಡಿಕೊಳ್ಳಲು 1 ನೇ ಪ್ರತಿವಾದಿ ಸುಮಾರು 2-3 ಲಕ್ಷ ರೂಪಾಯಿ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ 13 ನೇ ಅನುಸೂಚಿ ಸ್ವತ್ತು ಸಿದ್ದಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಆದ ಕಾರಣ ಸದರಿ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ಹಕ್ಕು ಹಿತಾಸಕ್ತಿ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

3. ದಿನಾಂಕ 1-12-2022 ರಂದು ದಾವಾ ಅನುಸೂಚಿ 13 ನೇ ಆಸ್ತಿಯುನ್ನು 6 ನೇ ಪ್ರತಿವಾದಿ ರೂ.8,20,000/-ಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇರೆಗೆ 6 ನೇ ಪ್ರತಿವಾದಿ ಹೆಸರಿಗೆ ಎಂ ಆರ್ ನಂ.32/2022-23 ರಂತೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಖಾತೆ ಆದ ನಂತರ 6 ನೇ ಪ್ರತಿವಾದಿಯೇ ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿತನ್ನ ಸಾಲ ತೀರುವಳಿಗಾಗಿ ಮಾರಾಟ ಮಾಡಿರುವ ಕಾರಣ

ವಾದಿಯರಿಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**